ಆ) ಗಣಿಗುತ್ತಿಗೆದಾರರುಗಳಿಂದ ವಂತಿಕೆಯನ್ನು ವಸೂಲಿ ಮಾಡಲು ಸರ್ಕಾರದಿಂದ ಆದೇಶವನ್ನು ಹೊರಡಿಸಿರುವುದಿಲ್ಲ. ಗಣಿ ಗುತ್ತಿಗೆದಾರರುಗಳು ಸ್ವಇಚ್ಛೆಯಿಂದ ಪರಿಸರ ಅಭಿವೃದ್ಧಿ ಹಾಗೂ ಗಣಿಗಾರಿಕೆಯಿಂದ ಬಾಧಿತ ಗ್ರಾಮಗಳ ಅಭಿವೃದ್ಧಿಗಾಗಿ ನೀಡಿರುವ ವಂತಿಕೆ ಹಣವಾಗಿರುತ್ತದೆ. ಈ ರೀತಿ ವಂತಿಕೆಯನ್ನು ವಸೂಲಿ ಮಾಡುತ್ತಿರುವ ಕ್ರಮವನ್ನು ತಕ್ಷಣವೇ ನಿಲ್ಲಿಸುವಂತೆ ಹಾಗೂ ಸಂಗ್ರಹಿಸಿರುವ ಮೊತ್ತವನ್ನು ಸರ್ಕಾರದ ಬೊಕ್ಕಸಕ್ಕೆ ತುಂಬುವಂತೆ ಸರ್ಕಾರದಿಂದ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಒತ್ತುವರಿ ಮಾಡಿ ನಿವೇಶನಗಳನ್ನು ವಿಂಗಡಿಸಿರುವುದು

373 : (618)

ಡಾ: ಸುಧಾಕರ್ ಎಂ.ಸಿ. (ಚಿಂತಾಮಣಿ)

ಅ) ಚಿಂತಾಮಣಿ ನಗರದ ಸ.ನಂ.34 ರಲ್ಲಿ ಪಕ್ಕದ ಬಡಾವಣೆಯವರು ಒತ್ತುವರಿ ಮಾಡಿ ಹೆಚ್ಚುವರಿ ನಿವೇಶನಗಳನ್ನು ವಿಂಗಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ತಾಲ್ಲೂಕು ಮೋಜಿಣಿದಾರರು ಸ.ನಂ.34ರಲ್ಲಿ ಅಳತೆ ಮಾಡಿ ಸರ್ಕಾರಿ ಜಾಗ ಒತ್ತುವರಿಯಾಗಿರುವುದನ್ನು ವರದಿ ಸಲ್ಲಿಸಿದ್ದರೂ ಇದುವರೆವಿಗೂ ತೆರವುಗೊಳಿಸದೇ ಇರುವುದಕ್ಕೆ ಕಾರಣಗಳೇನು;

ಇ) ಈ ಸರ್ಕಾರಿ ಸ್ವತ್ತನ್ನು ಉಳಿಸಿಕೊಳ್ಳುವ ಬಗ್ಗೆ ನಿರ್ಲಕ್ಷ್ಯ ತೋರಿಸಿರುವ ಅಧಿಕಾರಿಗಳ ವಿರುದ್ಧ ಯಾವ ರೀತಿ ಕ್ರಮ ತೆಗೆದುಕೊಳ್ಳಲಾಗುವುದು;

ಈ) ಇನ್ನೆಷ್ಟು ದಿನಗಳೊಳಗಾಗಿ ಈ ಅನಧಿಕೃತ ಒತ್ತುವರಿದಾರರನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಕೆ.ಎಸ್.ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು)

ಅ) ಹೌದು.

ಆ) ಚಿಂತಾಮಣಿ ತಾಲ್ಲೂಕು, ಚಿಂತಾಮಣಿ ಗ್ರಾಮದ ಸ.ನಂ.34 ಸರ್ಕಾರಿ ಜಮೀನಾಗಿದ್ದು, ಆಕಾರ್‌ಬಂದ್‌ನಂತೆ ಕೆರೆ ನೀರು ಮುಳುಗಡೆ ಕಾರಂಜಿ ಎಂದು ವರ್ಗೀಕರಣಗೊಂಡಿರುತ್ತದೆ. ಸದರಿ ಜಮೀನು ಒಟ್ಟು 9.21

ಎಕರೆ ವಿಸ್ತೀರ್ಣವಿದ್ದು, ಒತ್ತುವರಿಯಾಗಿರುವ ಬಗ್ಗೆ ತಾಲ್ಲೂಕು ಮೋಜಿಣಿದಾರರಿಂದ ಅಳತೆ ಮಾಡಿಸಿದ್ದು, ಪ್ರಸ್ತುತ ಜಮೀನಿನಲ್ಲಿ ಪಕ್ಕದ ಹಿಡುವಳಿ ಜಮೀನಿಗೆ ಹೊಂದಿಕೊಂಡಂತೆ ಸರ್ಕಾರಿ ಜಮೀನಿನಲ್ಲಿ ಸಿ.ಮಾಯಪ್ಪರೆಡ್ಡಿ ಬಿನ್ ವೆಂಕಟರಾಯಪ್ಪ ಎಂಬುವವರು 0.01, 1/2, (0.01.08) ಗುಂಟೆ ವಿಸ್ತೀರ್ಣದಲ್ಲಿ ವಾಸದ ಮನೆ ಕಟ್ಟಿಕೊಂಡಿದ್ದು, ಸುಮಾರು ವರ್ಷಗಳಿಂದ ವಾಸವಿರುತ್ತಾರೆ. ಸದರಿ ಮನೆಗೆ ಸ್ಥಳೀಯ ನಗರಸಭೆಯಿಂದ ಅನಧಿಕೃತ ಖಾತೆ ದಾಖಲೆಗಳನ್ನು ಪಡೆದಿರುವುದು ತಿಳಿದಿದ್ದು, ಸದರಿ ಅಕ್ರಮ ದಾಖಲೆಗಳನ್ನು ರದ್ದುಪಡಿಸಲು ನಗರಸಭೆಯ ಪೌರಾಯುಕ್ತರಿಗೆ ಪತ್ರ ಬರೆಯಲಾಗಿದೆ.

ಇ) ಇತ್ತೀಚೆಗೆ ಪ್ರಸ್ತುತ ಜಮೀನಿನ ಅಳತೆ ಮಾಡಿದ್ದು, ಒತ್ತುವರಿ ಗುರುತಿಸಿ, ಸದರಿ ಜಮೀನಿನಲ್ಲಿ ಟ್ರಂಚ್ ಹೊಡೆದು, ಬೌಂಡರಿ ನಿಗಧಿಪಡಿಸಿ, ನಾಮಫಲಕ ಹಾಕಿ ಜಮೀನು ಸಂರಕ್ಷಿಸಿದೆ.

ಈ) ಪ್ರಸ್ತುತ ಜಮೀನಿನಲ್ಲಿ ಬಂದಿರುವ ಅನಧಿಕೃತ ಕಟ್ಟಡದ ಬಗ್ಗೆ ಅಕ್ರಮ ದಾಖಲೆಗಳನ್ನು ರದ್ದುಪಡಿಸಿಕೊಂಡು ಕಾನೂನು ರೀತ್ಯಾ ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆಯಲಾಗುವುದು.

ಬೆಳಗಾವಿ ವಿಮಾನ ನಿಲ್ದಾಣದ ವಿಸ್ತರಣೆ /ಅಭಿವೃದ್ಧಿ

349 : (623)

ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ)

ಅ) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಅಬ್ಬನಕುಪ್ಪೆ ಗ್ರಾಮದ ಸ.ನಂ.78/2, 78/3, 78/4, 77/2, 77/5 ಮತ್ತು ಇತರೆ ಜಮೀನುಗಳಲ್ಲಿ ಲೇಔಟ್ ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಲೇಔಟ್ ನಿರ್ಮಾಣಕ್ಕೆ ನಕ್ಷೆ ಮಂಜೂರಾಗಿದೆಯೇ; ಯಾವ್ಯಾವ ಇಲಾಖೆಯಿಂದ ಲೇಔಟ್ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ (ವಿವರಗಳನ್ನು ನೀಡುವುದು);

ಇ) ಈ ಲೇಔಟ್ ನಿರ್ಮಾಣಕ್ಕೆ ಸರ್ಕಾರಿ ಜಮೀನು ಒತ್ತುವರಿಯಾಗಿದೆಯೇ; ಎಷ್ಟು ಜಮೀನನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ;